ತಾರೀಖು 18ನೇ ಫಿಬ್ರವರಿ 1895.

ರಾಜಮಂತ್ರ ಪ್ರವೀಣ ಮೆಸ್ಟರ್ ಜೆಂಜೆಲರಾವ್ ಸಿ. ಐ. ಈ. ಯವರು ಒಪ್ಪಿಸಿದ ರಾಜೀನಾಮೆಯನ್ನು ಅಂಗೀಕರಿಸುವದರಲ್ಲಿ, ಮೆಸ್ಟರ್ ಜೆಂಜೆಲರಾಯರು ಶ್ರೀಮ್ಮ ಮಹಾರಾಜರವರ ಕೌನ್ಸಿಲ್ ಮೆಂಬರಾಗಿ ಮೈಸೂರ ಸಂಸ್ಥಾನಕ್ಕೊಸ್ಕರ ಮಾಡಿದ ಶ್ಲಾಘ್ಯವಾದ ಕಾರ್ಯಗಳ ವಿಷಯದಲ್ಲಿ ಆಳಿದ ಶ್ರೀಮ್ಮ ಮಹಾರಾಜರವರಿಗೆ ಉಂಟಾಗಿದ್ದ ಉದಾರಾಭಿಪ್ರಾಯವನ್ನ ಶ್ರೀಮ್ಮ ಮಹಾರಾಣಿ ರೀಜೆಂಟ್ ರವರು ಈ ಮೂಲಕ ಪ್ರದರ್ಶನ ಪಡಿಸುತ್ತಾರೆ. ಮೆಸ್ಟರ್ ಜೆಂಜೆಲರಾಯರ ಪ್ರಕೃಷ್ಟವಾದ ಸಾಮರ್ಥ್ಯದಿಂದಲೂ ವಿಶೇಷವಾದ ಅನುಭವದಿಂದಲೂ ಈ ಸಂಸ್ಥಾನಕ್ಕೆ ಅರು ವರುಷಗಳಿಂದ ಅಮೌಲ್ಯವಾದ ಸಹಾಯ ವುಂಟಾಗಿತ್ತು. ಆರೋಗ್ಯಭಾಗ್ಯವನ್ನು ಕಾಪಾಡಿಕೊಳ್ಳುವದಕ್ಕಾಗಿ ಅವರು ಈ ಸಂಸ್ಥಾನದ ಕೆಲಸದಿಂದ ವಿಶ್ರಾಂತಿಯಂ ಪಡೆಯಬೇಕಾಗಿ ಬಂದದ್ದಕ್ಕೆ ಶ್ರೀಮ್ಮ ಮಹಾರಾಣಿಯವರು ವಿಷಾದಪಡುತ್ತಾರೆ.

ಬಮೋಜೀಬ್ ಹುಕುಂ,

ಬೆಂಗಳೂರು, ಕೆ. ಶೇಷಾದ್ರಿ ಅಯ್ಯರ್,
18ನೇ ಫಿಬ್ರವರಿ 1895. ಮೈಸೂರ್ ದಿವಾ.

ತಾರೀಖು 20ನೇ ಡಿಸೆಂಬರ್ 1894.

ನಂ. 10510.—ಆರ್. ಎಫ್. 147 92.—ಮೈಸೂರ ಶ್ರೀಮ್ಮ ಮಹಾರಾಜಾ ಸರ್ಕಾರದವರು ಅಜ್ಞಾಪಿಸುವದೇನಂದರೆ, ಮೈಸೂರ್ ಲ್ಯಾಂಡ್ ರೆವಿನ್ಯೂ Xನೇ ರೂಲ್ 4ನೇ ಪ್ಯಾರಾಕ್ಕೆ ಬದಲಾಗಿ ಇದರಡಿ ಬರುವದನ್ನು ಉಪಯೋಗಿಸತಕ್ಕದ್ದು:—

"4. ಲೇಕೆಲ್‌ಫಂಡು ಇಲಾಖೇಯವರು ಪಬ್ಲಿಕ್ ವರ್ಕ್ಸ್ ಇಲಾಖೇಯವರು ಮತ್ತು ಇತರ ಸರ್ಕಾರದ ಇಲಾಖೇಯವರು, ವ ಮ್ಯುನಿಸಿಪಾಲಿಟಿಯವರು ಅಥವಾ ಅವರುಗಳ ಕಂಟ್ರಾಕ್ಟುದಾರರು ಹಾಂಗೆ ಮಾಡುವದಕ್ಕೆ ವಿಶೇಷತಃ ಅಧಿಕಾರ ಕೊಡಲ್ಪಟ್ಟರೆ ಅವರು ಗವರ್ಮೆಂಟಿನಿಂದ ವಿಧಿಸೋಣಾಗುವ ಅಂಥಾ ರಾಜಪಾಲು ಮೊಬಲಗನ್ನು ತೆರುವದಕ್ಕೆ ಬಳಪಟ್ಟು ನದಿಗಳ, ನಾಲಾಗಳ ಅಥವಾ ಸರ್ಕಾರ್ ಕೆರೆಗಳ ಅಂಗಳಗಳಿಂದಲಾಗಲಿ, ಸರ್ಕಾರ್ ಕೆಲಸಗಳಿಗೆ ಪ್ರಜೆಗಳ ವುಪಯೋಗಾರ್ಥವಾದ ವಿಕೇಪ ಕೆಲಸಗಳಿಗೋಸ್ಕರ ಗೊತ್ತು ಮಾಡಲ್ಪಡದಂಥಾ ಆಕಾರ ಕಾಣದ ಅಥವಾ ಹಿಡುವಳೀಲಿ ಯಿಲ್ಲದ ಜಮೀನಿನಿಂದಲಾಗಲಿ ಮಣ್ಣು, ಕಲ್ಲು, ಕಂಕರ್, ಮರಳು, ಮರಂಮತ್ತು ಇತರ ಪದಾರ್ಥಗಳನ್ನು ತಾಗಿಸಬಹುದು; ಪರಂತು ಡೆಪ್ಯುಟಿ ಕಮ್ಮಿಷನರವರು ಸದರೀ ಪದಾರ್ಥಗಳು ಈ ರೂಲಿಗನು ಸಾರವಾಗಿ ಗೊತ್ತಾದ ಪ್ರದೇಶಗಳಿಂದ ತಾಗಿಸಲ್ಪಡಕೂಡದೆಂದು ನಿಷೇಧಿಸಬಹುದು. ಅಥವಾ ಅವರಿಗೆ ಯುಕ್ತವಾಗಿ ಕಾಣಬರುವ ಪರತ್ತುಗಳನ್ನು ವಿಧಿಸಬಹುದು."

ತಾರೀಖು 31ನೇ ಜನವರಿ 1895.

ನಂ. 11956.—ಜೆ. 674.—1870ನೇ ಇಸವಿಯ VIIನೇ ನಂಬರ್ ಕೋರ್ಟ್‌ಫೀಸ್ ಆಕ್ಟಿನ 35ನೇ ಸೆಕ್ಷನಿನಿಂದ ಉಂಟುಮಾಡಲ್ಪಟ್ಟಿರುವ ಅಧಿಕಾರಗಳನ್ನು ಚಲಾಯಿಸಿ ಘನವನ್ನೈಯಿದ ಶ್ರೀಮ್ಮ ಮಹಾರಾಜಾ ಸರ್ಕಾರದವರು ಇದರಿಂದ ಅಜ್ಞಾಪಿಸುತ್ತಾರೆ ನಂದರೆ:—

1882ನೇ ಇಸವಿಯ XIVನೇ ನಂಬರ್ ಆಕ್ಟಾದ ಸಿವಿಲ್ ಪ್ರೊಸಿಡ್ಯೂರ್ ಕೋಡಿನ 244ನೇ ಸೆಕ್ಷನ್ (ಸಿ) ಕ್ಲಾಜ್ ಅನ್ವ ಕೊಡಲ್ಪಡುವ ಹುಕುಂಗಳ ಮೇಲಿನ ಅಪೀಲ್‌ಗಳಿಗಾಗಿ ವಸೂಲ್ ಮಾಡಲ್ಪಡತಕ್ಕ ಫೀಜ್ ಮೊಬಲಗು, 1870ನೇ ಇಸವಿಯ ಕೋ ಫೀಜ್ ಆಕ್ಟಿನ ಯರಡನೇ ಷೆಡ್ಯೂಲ್‌ನಲ್ಲಿ ಕಂಡ 11ನೇ ಆರ್ಟಿಕಲ್ ಪ್ರಕಾರ ವಸೂಲಾಗತಕ್ಕ ಮೊಬಲಗಿಗೆ ತಕ್ಕಂತೆ ಪೂರ್ತಿ ತಕ್ಕದ್ದು.

ತಾರೀಖು 4ನೇ ಫಿಬ್ರವರಿ 1895.

ನಂ. 11966.—ಜೆ. 682.—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ 12ನೇ ಸೆಕ್ಷನ್ ಅನುಸರಿಸಿ ಹಾಸನ ಡಿಸ್ಟ್ರಿಕ್ಟು ಎಕಸ್ಟ್ರಾ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ವಿ. ಶ್ರೀನಿವಾಸಾಚಾರ್ಲು ಯವರು 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟು, ಸದರೀ ಕೋಡಿನ 37ನೇ ಸೆಕ್ಷನ್ ಅನುಸರಿಸಿ, ಸದರೀ ಕ್ಲಾಸ್ ಮಾಜಿಸ್ಟ್ರೇಟರುಗೆ ಜಾಸ್ತೀ ಅಧಿಕಾರವಾಗಿ ಗವರ್ಮೆಂಟಿನವರು ಕೊಡಬಹುದೆಂದು ನಾಲ್ಕನೆಯ ಷೆಡ್ಯೂಲ್‌ನಲ್ಲಿ ನಮೂದಾಗಿರುವ ಇದರಡಿ ತಿಳಿಸಲ್ಪಡುವ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

(1) ಆಗಿಂದಾಗ್ಯೆ ಹೇಸಿಗೆ ಮಾಡಕೂಡದೆಂದು ಹುಕುಂ ಕೊಡುವ ಅಧಿಕಾರ,—143ನೇ ಸೆಕ್ಷನ್.

(2) 144ನೆಯ ಸೆಕ್ಷನ್ ಅನುಸರಿಸಿ ಹುಕುಂ ಕೊಡುವ ಅಧಿಕಾರ.

(3) ಲಾಷ್ ವಿಚಾರಣೆ ಮಾಡುವ ಅಧಿಕಾರ—174ನೆಯ ಸೆಕ್ಷನ್ ಪ್ರಕಾರ.

(4) ಫಿರ್ಯಾದಿನ ಮೇಲೆ ಮೊಕದ್ದಮೆಗಳನ್ನು ಹಿಡಿಯುವ ಅಧಿಕಾರ,—191ನೇ ಸೆಕ್ಷನ್ ಪ್ರಕಾರ.

(5) ಪೊಲೀಸಿನವರ ರಿಪೋರ್ಟ್‌ಗಳ ಮೇಲೆ ಮೊಕದ್ದಮೆಗಳನ್ನು ಹಿಡಿಯುವ ಅಧಿಕಾರ,—191ನೇ ಸೆಕ್ಷನ್.